**ಈ ವಾರದ ಪಾಠವನ್ನು ಸಬ್ಬತ್ತಿಗಾಗಿ ಅಧ್ಯಯನ ಮಾಡಿರಿ, ಫೆಬ್ರವರಿ 24.**

**ಪಾಠ 8** **ಫೆಬ್ರವರಿ 17–23**

# ದಶಾಂಶದ ಪರಿಣಾಮಗಳು

ಸಬ್ಬತ್ತಿನ ಮಧ್ಯಾಹ್ನ:

ಈ ವಾರದ ಪಾಠದ ಅಧ್ಯಯನಕ್ಕಾಗಿ:ಮಾರ್ಕ 16:15; 1 ಪೇತ್ರನು 3:8, 9; 1 ಕೊರಿಂಥ 9:14; ರೋಮ 3:19–24.

**ಸ್ಮರಣವಾಕ್ಯ: 'ದೇವಾಲಯದ ಊಳಿಗವನ್ನು ನಡಿಸುವವರು ದೇವಾಲಯದ ಆದಾಯದಿಂದ ಊಟ ಮಾಡುತ್ತಾರೆಂಬುದೂ ಯಜ್ಞವೇದಿಯ ಬಳಿಯಲ್ಲಿ ಸೇವೆ ಮಾಡುವವರು ಆ ವೇದಿಗೆ ಬರುವ ಪದಾರ್ಥಗಳಲ್ಲಿ ಪಾಲುಹೊಂದುತ್ತಾರೆಂಬುದೂ ನಿಮಗೆ ತಿಳಿಯದೋ? ಅದೇ ರೀತಿಯಾಗಿ ಕರ್ತನು ಸಹ ಸುವಾರ್ತೆಯನ್ನು ಸಾರುವವರು ಸುವಾರ್ತೆಯಿಂದಲೇ ಜೀವನ ಮಾಡಬೇಕೆಂದು ನೇಮಿಸಿದನು.' 1 ಕೊರಿಂಥ 9:13, 14**).

ಕಳೆದ ವಾರ ನಾವು ಓದಿದ  ಹಾಗೆ ದಶಾಂಶವು ನಂಬಿಕೆಯನ್ನು ತೋರಿಸುವ ಒಂದು ಮುಖ್ಯವಾದ ವಿಧಾನವಾಗಿದೆ. ನಮ್ಮ ನಂಬಿಕೆಯನ್ನು ವ್ಯಕ್ತ ಪಡಿಸುವ, ಅಥವಾ ಪರೀಕ್ಷಿಸುವ ಒಂದು ಮಾರ್ಗವಾಗಿದೆ.ಕ್ರಿಸ್ತ ನಂಬಿಕೆಯಲ್ಲಿ ಇದ್ದಿರೋ ಇಲ್ಲವೋ ಎಂದು ನಿಮ್ಮನ್ನು ನೀವು ಪರೀಕ್ಷಿಸಿಕೊಳ್ಳಿರಿ. ನಿಮ್ಮನ್ನು ಪರಿಶೋಧಿಸಿಕೊಳ್ಳಿರಿ. ಏನು, ಯೇಸು ಕ್ರಿಸ್ತನು ನಿಮ್ಮಲ್ಲಿದ್ದಾನೆಂಬುದು ನಿಮ್ಮನ್ನು ಕುರಿತು ನಿಮಗೆ ಚೆನ್ನಾಗಿ ತಿಳಿಯುವುದಿಲ್ಲವೋ? 'ಆತನು ನಿಮ್ಮಲ್ಲಿಲ್ಲದಿದ್ದರೆ ನೀವು ಅಯೋಗ್ಯರೇ'(2 ಕೊರಿಂಥ 13:5).

ಅಬ್ರಹಾಮನು ಮೇಲ್ಕಿಜೆದಕನಗೆ ದಶಾಂಶವನ್ನು ನೀಡುವುದು ದಶಾಂಶದ ಕುರಿತಾಗಿ ಸತ್ಯವೇದದಲ್ಲಿ ದಾಖಾಲಾಗಿರುವ ಮೊದಲ ಸನ್ನಿವೇಶವಾಗಿದೆ.  (ಆದಿಕಾಂಡ 14:18–20, ಇಬ್ರಿಯರಿಗೆ 7:4).  ಯಾಜಕರು ತಮ್ಮ ಅನುದಿನದ ಜೀವನಕ್ಕಾಗಿ ದೇವಾಲಯದ ದಶಾಂಶವನ್ನು ಉಪಯೋಗಿಸಿದರು (2 ಪೂರ್ವಕಾಲ ವೃತ್ತಾಂತ 31:4–10). ಈ ದಿನಗಳಲ್ಲಿ ದಶಾಂಶವು ದೇವರ ಸೇವೆಯ ಸಹಾಯಾರ್ಥವಾಗಿ ನೀಡುವುದಾಗಿದೆ.

ಇದನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ದೇವರೊಂದಿಗೆ ನಮಗಿರುವ ಸರಿಯಾದ ಸಂಬಂಧವನ್ನು ದಶಾಂಶವು ತೋರಿಸುತ್ತದೆ.

ದಶಾಂಶದ ಪರಿಣಾಮ, ಉಪಯೋಗ, ಪ್ರಾಮುಖ್ಯತೆ ಮತ್ತು ಅದನ್ನು ಹಂಚುವ ವಿಧಾನವು ನಮ್ಮ ಆತ್ಮೀಯ ಅಭಿವೃದ್ಧಿಗಾಗಿ ಮತ್ತು ದೇವರ ಕೆಲಸವನ್ನು ವ್ಯವಸ್ಥಿತವಾಗಿ ನಡೆಸಲು ಹಾಗೂ ಸುವಾರ್ತೆಯನ್ನು ಸಾರಲು ಬೇಕಾದ ಸಹಕಾರವನ್ನು ನೀಡಲು ಸಹಾಯ ಮಾಡುತ್ತದೆ. ಇದು ದೇವರ ಯೋಜನೆ ಮತ್ತು ನಂಬಿಕೆಯ ಪಾರುಪತ್ಯಗಾರನು ಹಾಕುವ ಮೊದಲ ಹೆಜ್ಜೆಯಾಗಿದೆ.

ಈ ವಾರ ನಾವು ದಶಾಂಶದ ಕುರಿತಾಗಿ ಇನ್ನೂ ಹೆಚ್ಚಿನ ವಿಚಾರಗಳನ್ನು ಕಲಿಯೋಣ; ಅದರ ಹಂಚುವಿಕೆ, ಇದು ಇತರರಿಗೆ ಹೇಗೆ ಅನ್ವಯಿಸುತ್ತದೆ, ಮತ್ತು ಅದು ಹೇಗೆ ನಮ್ಮ ಆತ್ಮೀಯ ಜೀವನಗಳನ್ನು ಉತ್ತಮಪಡಿಸುತ್ತದೆ ಎಂದು ನೋಡೋಣ.

**ಪಾಠ 8 ದಶಾಂಶದ ಪರಿಣಾಮಗಳು ಫೆಬ್ರವರಿ 17–23**

**ಭಾನುವಾರ ಫೆಬ್ರವರಿ 18**

## ಒಟ್ಟಾಗಿ ನಾವು ದೇವರ ಕೆಲಸಕ್ಕೆ ಹಣ ಒದಗಿಸುವುದು

‘ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ.’(ಮಾರ್ಕ 16:15) ಮತ್ತು ನಾನು ನಿಮಗೆ ಅಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶ ಮಾಡಿರಿ,(ಮತ್ತಾಯ 28:19,20) ಎಂದು ಯೇಸುವು ನಮಗೆ ಹೇಳಿದನು. ಈ ಮೂಲಕ ಭೂಮಿಯಲ್ಲಿ ಅತೀ ಶ್ರೇಷ್ಠವಾದ ಕಾರ್ಯದಲ್ಲಿ ಭಾಗಿಯಾಗುವಂತೆ ದೇವರು ಬಯಸುತ್ತಾನೆ. ದೇವರ ಈ ಕೆಲಸಕ್ಕೆ ಹಣವನ್ನು ಒದಗಿಸುವುದು ಪಾರುಪತ್ಯಗಾರರಾಗಿ ನಮ್ಮ ಕರ್ತವ್ಯವಾಗಿದೆ. ಕ್ರಿಸ್ತನನ್ನು ಇತರರಿಗೆ ಪರಿಚಯಮಾಡುವುದರಲ್ಲಿ ನಮ್ಮ ವ್ಯಯಕ್ತಿಕ ಸಂಬಂಧವು ಬಲಗೊಳ್ಳುತ್ತದೆ, ಮತ್ತು ಇದರ ಮೂಲಕ ದೇವರ ಕೆಲಸಗಾರನಾಗಿ ನನ್ನ ಎಲ್ಲಾ ಸಂಪನ್ಮೂಲವನ್ನು ದೇವರ ಕೆಲಸಕ್ಕೆ ತರುವ ಭಾಗ್ಯ ನನ್ನಾದಾಗುತ್ತದೆ. ಯಶಸ್ವಿಯಾದ ಸುವಾರ್ತೆಯು ಯಾವ ರೀತಿಯಲ್ಲಿ ನಮ್ಮ ವಿಶ್ವಾಸವನ್ನು ಬಲಪಡಿಸುತ್ತದೋ ಅದೇ ರೀತಿಯಲ್ಲಿ ಈ ದೇವರ ಕೆಲಸಕ್ಕೆ ಹಣ ಒದಗಿಸುವುದರಲ್ಲಿ ನಾವು ಐಕ್ಯತೆಯನ್ನು



ಕಾಪಾಡಿಕೊಳ್ಳುವುದರಲ್ಲಿ ಸಹಾಯ ಮಾಡುತ್ತದೆ.

ಈ ಕೆಲಸಕ್ಕಾಗಿ ಹಣವನ್ನು ಒದಗಿಸಲು ದೇವರು ಅನುಮತಿಸಿರುವ ಹಣಕಾಸಿನ ವಿಧಾನ ಯಾವುದು ‘ಇಡೀ ದಶಾಂಶ’ ಎಂಬುದರ ಅರ್ಥವೇನು? (ಮಲಾಕಿ 3:10) ನನ್ನ ಆಲಯದಲ್ಲಿ ಆಹಾರ ಇರುವ ಹಾಗೆ ಎಂಬುದರ ಅರ್ಥವೇನು? ಮಲಾಕಿ 3:10)

______________________________________

______________________________________

ನಾವು ನೋಡಿದ ಹಾಗೆ ಅಬ್ರಹಾಮನ ಮತ್ತು ಯಾಕೊಬನ ಕಾಲದಿಂದಲೂ ಜನರು ದಶಾಂಶವನ್ನು ನೀಡುತ್ತಿದ್ದಾರೆ (ಆದಿಕಾಂಡ 14:20, 28:22) ಇದಕ್ಕೂ ಮೊದಲು ಕೂಡ ಈ ವಿಧಾನ ಇರಬಹುದೇನೋ. ದೇವರ ಸಭೆಯ ಹಣಕಾಸನ್ನು ಒದಗಿಸುವುದರಲ್ಲಿ ದಶಾಂಶವು ಒಂದು ವ್ಯವಸ್ಥೆಯಾಗಿದೆ. ಇದು ಹಣವನ್ನು ಒದಗಿಸುವ ಒಂದು ವಿಶೇಷವಾದ ವಿಧಾನ ಹಾಗೂ ಆತನ ಕೆಲಸವನ್ನು ಪೂರೈಸುವ ವ್ಯವಸ್ಥೆಯಾಗಿದೆ.

ಇಂದಿನ ಸಂಸ್ಕೃತಿಗಳಲ್ಲಿ, ಅನೇಕ ಕ್ರೈಸ್ತರು ದೇವರ ಕೆಲಸಗಳಿಗಾಗಿ ಜನರು ತಮ್ಮ ಆದಾಯದಲ್ಲಿ ಸ್ವಲ್ಪ ಹಣ ನೀಡುತ್ತಾರೆ. ‘ಪ್ರತಿಯೊಬ್ಬ ಕ್ರೈಸ್ತನು ದಶಾಂಶವನ್ನು ನೀಡಿದರೆ ಅದರ ಪ್ರತಿಫಲವು ಊಹಿಸಲು ಸಾಧ್ಯವಾಗದ, ಆಶ್ಚರ್ಯವಾದ, ನಮ್ಮ ಕಲ್ಪನೆಗೆ ಮೀರುತ್ತದೆ.’ ಕ್ರಿಸ್ಟಿಯನ್ ಸ್ಮಿತ್ ಅಂಡ್ ಮೈಕೆಲ್ ಓ. ಎಮರ್ಸನ್, ಪಾಸಿಂಗ್ ದಿ ಪ್ಲೇಟ್ (ನ್ಯೂ ಯಾರ್ಕ್; ಆಕ್ಸ್ಫರ್ಡ್ ಯೂನಿವರ್ಸಿಟಿ ಪ್ರೆಸ್, 2008)ಪುಟ 27.

ಪ್ರತಿಯೊಂದು ಕಾಲದಲ್ಲೂ ಕೂಡ ದೇವರ ಕೆಲಸಕ್ಕೆ ಹಣ ಒದಗಿಸುವ ಜನರು ಇದ್ದಾರೆ. ಈ ಜಾಗತಿಕ ಕಾರ್ಯದಲ್ಲಿ ನಾವೆಲ್ಲರೂ ಕೂಡ ನಮ್ಮ ಜವಾಬ್ದಾರಿಯನ್ನು ಅರಿತು ಒಟ್ಟಾಗಿ ಕೆಲಸ ಮಾಡಬೇಕಾಗಿದೆ. ದೇವರ ಕೆಲಸಕ್ಕೆ ಹಣ ಒದಗಿಸುವುದರಲ್ಲಿ ನಾವು ನಿರ್ಲಕ್ಷ್ಯ ಮತ್ತು ನಿರಾಸಕ್ತಿಯನ್ನು ತೋರಿಸಲು ಸಾಧ್ಯವಿಲ್ಲ. ‘ನಾವು ದೇವರ ಆಲಯವನ್ನು ನಿರ್ಲಕ್ಷ್ಯಸುವುದಿಲ್ಲ’ (ನೆಹೇಮಿಯ 10:39). ಎಂದು ಯಾಜಕರು ನೆಹೇಮಿಯನಿಗೆ ಹೇಳಿದ ಕಾಲಕ್ಕಿಂತಲೂ ಹೆಚ್ಚಿನ ಜವಾಬ್ದಾರಿಯನ್ನು ನಾವು ಹೊಂದಿದ್ದೇವೆ. ನಾವು 1800 ರಲ್ಲಿ ವಿಶ್ವಾಸಿಗಳು ಎದುರಿಸಿದ ಪರಿಸ್ಥಿತಿಗಿಂತ ಹೆಚ್ಚಿನ

ಒತ್ತಡದಲ್ಲಿ ನಾವು ಇದ್ದೇವೆ. ಈ ದಿನಗಳಲ್ಲಿ ಸಭಿಕರು ಮತ್ತು ಸೇವಕರು ಆತ್ಮೀಯವಾಗಿ ಐಕ್ಯರಾಗಿದ್ದು ಹಾಗೂ ಹಣಕಾಸನ್ನು ಒಟ್ಟಾಗಿ ಸೇರಿಸಿ ಜಾಗತಿಕವಾಗಿ ಈ ಸುವಾರ್ತೆಯ ಕೆಲಸವನ್ನು ಪೂರ್ಣಗೊಳಿಸಬೇಕಾಗಿದೆ.

ಜಾಗತಿಕ ಮಟ್ಟದಲ್ಲಿರುವ ಅಡ್ವೆಂಟಿಸ್ಟ್ ಸಭೆಯ ಕೆಲಸದ ಕುರಿತಾಗಿ ಆಲೋಚಿಸಿರಿ (ಪ್ರಕಟಣೆ 14:6,7) ಈ ಸುವಾರ್ತೆಯ ಕೆಲಸವನ್ನು ಸಂಪೂರ್ಣಮಾಡುವುದರಲ್ಲಿ ನಮ್ಮಲ್ಲಿ ಪ್ರತಿಯೊಬ್ಬರೂ ಅವನ ಅಥವಾ ಅವಳ ಜವಾಬ್ದಾರಿಯನ್ನು ಹೇಗೆ ತಿಳಿದುಕೊಳ್ಳುವುದು?

**ಪಾಠ 8 ದಶಾಂಶದ ಪರಿಣಾಮಗಳು ಫೆಬ್ರವರಿ 17–23**

**ಸೋಮವಾರ ಫೆಬ್ರವರಿ 19**

## ದೇವರ ಆಶೀರ್ವಾದಗಳು

ನಾವು ಮಲಾಕಿ 3:10, ದಶಾಂಶ ದಲ್ಲಿ ನಂಬಿಗಸ್ತರಾಗಿರುವವರಿಗೆ ದೇವರು ಶ್ರೇಷ್ಠವಾದ ಆಶೀರ್ವಾದಗಳನ್ನು ವಾಗ್ದಾನ ಮಾಡಿದ್ದಾನೆ. ಆದರೂ ಕೂಡ ದೇವರ ಆಶೀರ್ವಾದ ಒಂದು ಆಯಾಮದ್ದಲ್ಲ. ಉದಾಹರಣೆಗೆ, ದೇವರ ಆಶೀರ್ವಾದವೆಂದರೆ ಎಲ್ಲಾ ವಿಷಯಗಳಿಗಿಂತ ಪ್ರಾಪಂಚಿಕ ವಸ್ತುಗಳನ್ನು ಹೊಂದುವುದೇ ಮೂಲ ಉದ್ದೇಶವಾಗಿರಬಾರದು.

ಮಲಾಕಿಯ ಪುಸ್ತಕದಲ್ಲಿ ಹೇಳಿರುವ ಆಶೀರ್ವಾದವು ಆತ್ಮಿಕ ಮತ್ತು ಶಾಶ್ವತವಾದದ್ದು. ದೇವರ ಆಶಿರ್ವಾದವು ರಕ್ಷಣೆ, ಸಂತೋಷ, ಮನಶಾಂತಿ ಮತ್ತು ದೇವರು ನಮಗಾಗಿ ಯಾವಾಗಲೂ ಒಳ್ಳೆಯದನ್ನೇ ಮಾಡುವುದರ ಮೂಲಕ ಸಾದ್ಯಶ್ಯವಾಗಿದೆ. ಇದಲ್ಲದೆ, ನಾವು ದೇವರಿಂದ ಆಶೀರ್ವಾದ ಹೊಂದಿದಾಗ ನಮಗಿಂತ ಕಡಿಮೆ ಭಾಗ್ಯವುಳ್ಳವರ ಜೊತೆಯಲ್ಲಿ ನಮ್ಮ ಆಶಿರ್ವಾದಗಳನ್ನು ಹಂಚಿಕೊಳ್ಳುತ್ತೇವೆ. ಇತರರನ್ನು ಆಶೀರ್ವದಿಸಲು ನಾವು ಆಶೀರ್ವಾದ ಹೊಂದಿದ್ದೇವೆ. ಇನ್ನೂ ಹೇಳುವುದಾದರೆ ನಮ್ಮ ಮೂಲಕ ದೇವರು ಇತರರಿಗೆ ತನ್ನ ಆಶೀರ್ವಾದಗಳನ್ನು ಹಂಚುತ್ತಾನೆ.

1 ಪೇತ್ರ 3:8, ನ್ನು ಓದಿರಿ ನಾವು ಆಶೀರ್ವಾದ ಹೊಂದುವುದು ಮತ್ತು ಇತರರಿಗೆ ಆಶೀರ್ವಾದದಾಯಕರಾಗಿರುವುದರ ನಡುವಿನ ಸಂಬಂಧವೇನು ಎಂದು ಪೇತ್ರನು



ಹೇಳುತ್ತಾನೆ?

ದಶಾಂಶದಿಂದ ನಾವು ಎರಡು ಆಶೀರ್ವಾದಗಳನ್ನು ಹೊಂದುತ್ತೇವೆ. ನಾವು ಅಶೀರ್ವದಿಸಲ್ಪಡುತ್ತೇವೆ, ಮತ್ತು ಇತರರಿಗೆ ಆಶೀರ್ವಾದವಾಗುತ್ತೇವೆ. ನಮಗೆ ಏನು ಕೊಡಲ್ಪಟ್ಟಿದೆಯೋ ಅದನ್ನು ನಾವು ಇತರರಿಗೆ ನೀಡಬಹುದು. ದೇವರ ಆಶಿರ್ವಾದವು ನಮ್ಮನ್ನು ಅಂತರಿಕವಾಗಿ ತಲುಪುವುದರ ಮೂಲಕ ಅದು ಬೇರೆಯವರನ್ನು ಕೂಡ ತಲುಪುತ್ತದೆ. 'ಕೊಡಿರಿ, ಆಗ ನಿಮಗೂ ಕೊಡಲ್ಪಡುವುದು.... ನೀವು ಆಳೆಯುವ ಅಳತೆಯಿಂದಲೇ ಟಿಮಗೂ ಅಳೆಯುವರೂ ಅಂದನು. ಅ. ಪೋ. ಕೃ 20:35.ನ್ನು ಓದಿರಿ ಇದು ದಶಾಂಶಕ್ಕೂ ಹೇಗೆ ಅನ್ವಯಿಸುತ್ತದೆ.'

ದಶಾಂಶವು ನಮಗೆ ತಿಳಿಸುವ ಶ್ರೇಷ್ಠವಾದ ಆಶೀರ್ವಾದ ಎಂದರೆ ದೇವರನ್ನು ನಂಬುವುದಾಗಿದೆ.(ಯೆರೆಮಿಯ 17:7) ದೇವರ ಆಜ್ಞೆಗಳು ಶಾಶ್ವತವಾಗಿರುವ ನಿಯಮದ ಮೇಲೆ ದಶಾಂಶದ ವ್ಯವಸ್ಥೆಯನ್ನು ರೂಪಿಸಲಾಗಿದೆ. ಈ ದಶಾಂಶ ನಿಯಮವು ಯೆಹೂದ್ಯರಿಗೆ ಆಶೀರ್ವಾದವಾಗಿತ್ತು, ಇಲ್ಲದೆ ಇದ್ದರೆ ದೇವರು ಅವರಿಗೆ ಅದನ್ನು ನೀಡುತ್ತಿರಲಿಲ್ಲ. ಲೋಕದ ಕೊನೆಯ ಕಾಲದಲ್ಲಿ ದೇವರ ಸುವಾರ್ತೆಯನ್ನು ತೆಗೆದುಕೊಂಡು ಹೋಗುವವರಿಗೆ ಇದು ಆಶೀರ್ವಾದವಾಗಿದೆ. ನಮ್ಮ ಪರಲೋಕದ ತಂದೆಯು ದಯೆಯ ವ್ಯವಸ್ಥಿತವಾದ ಕೊಡುವಿಕೆಯನ್ನು ತನ್ನನ್ನು ತಾನು ಶ್ರೀಮಂತವಾಗಿಸಿಕೊಳ್ಳಲು ಪರಿಚಯಿಸಲಿಲ್ಲ. ದಯೆಯ ವ್ಯವಸ್ಥಿತವಾದ ಕೊಡುವಿಕೆಯು ಮನುಷ್ಯನಿಗೆ ಅಗತ್ಯವಾದದ್ದು ಎಂದು ಯೋಚಿಸಿ ಅವನಿಗಾಗಿ ರೂಪಿಸಿದನು' **ಎಲೆನ್ ಜಿ ವೈಟ್ ಟೆಸ್ಟಿಮೋನಸ್ ಫಾರ್ ದಿ ಚರ್ಚ್ ಸಂಪುಟ 3, ಪುಟ 404, 405**.

ಬೇರೆಯವರ ಸೇವೆಯ ಮೂಲಕ ನೀವು ಆಶಿರ್ವಾದಹೊಂದಿದ ಸನ್ನಿವೇಶಗಳನ್ನು ಜ್ಞಾಪಕವಮಾಡಿಕೊಳ್ಳಿರಿ. ಹಾಗಾದರೆ ನೀವು ಕೂಡ ಬೇರೆಯವರಿಗೆ ಹೇಗೆ ಆಶೀರ್ವಾದವಾಗಿರಬಹುದು?

**ಪಾಠ 8 ದಶಾಂಶದ ಪರಿಣಾಮಗಳು ಫೆಬ್ರವರಿ 17–23**

**ಮಂಗಳವಾರ ಫೆಬ್ರವರಿ 20**

## ದಶಾಂಶದ ಉದ್ದೇಶ

ಪೌಲನು ತಿಮೋಥಿಗೆ ಹೀಗೆ ಬರೆಯುತ್ತಾನೆ 'ಕಣ ತುಳಿಯುವ ಎತ್ತಿನ ಬಾಯಿ ಕಟ್ಟಬಾರದೆಂತಲೂ ಆಳು ತನ್ನ ಕೂಲಿಗೆ ಯೋಗ್ಯನಾಗಿದ್ದಾನೆಂತಲೂ ಶಾಸ್ತ್ರದಲ್ಲಿ ಹೇಳಿದೆಯಲ್ಲಾ' (1 ತಿಮೋಥಿ 3:18). ಆತನು ಮೋಶೆಯು ಧರ್ಮೋಪದೇಶ ಕಾಂಡ 25:4 ರಲ್ಲಿ ಎತ್ತಿನ ವಿಚಾರದಲ್ಲಿ ಮತ್ತು ಯೇಸು ಲೂಕ 10:7 ರಲ್ಲಿ ಕೆಲಸಗಾರನ ವಿಷಯದಲ್ಲಿ ಹೇಳಿರುವ ವಿಷಯವನ್ನು ಉಲ್ಲೇಖಿಸುತ್ತಿದ್ದಾನೆ. ಎತ್ತಿನ ವಿಚಾರವಾಗಿರುವ ವಾಕ್ಯವು ಒಂದು ಜ್ಞಾನೋಕ್ತಿಯಾಗಿರಬಹುದು, ಮತ್ತು ಅದರ ಅರ್ಥವೆಂದರೆ ಎತ್ತು ಕೆಲಸ ಮಾಡುವಾಗ ಹುಲ್ಲನ್ನು ತಿನ್ನಬಹುದು. ಅದೇ ರೀತಿಯಲ್ಲಿ ಎರಡನೇಯ ಜ್ಞಾನೋಕ್ತಿಯು ಸುವಾರ್ತೆಯನ್ನು ತಿಳಿಸುವ ಕೆಲಸಗಾರರು ಸಂಬಳವನ್ನು ಬಹುಮಾನವಾಗಿ ಹೊಂದಬಹುದು ಎಂಬುದಾಗಿ ಹೇಳುತ್ತದೆ.

ದೇವರು ಒಂದು ವ್ಯವಸ್ಥೆಯಲ್ಲಿ ಸೃಷ್ಟಿಸಿ ಮತ್ತು ಕೆಲಸಮಾಡುತ್ತಾನೆ. ಆತನು ಸೌರವ್ಯೂಹ ವ್ಯವಸ್ಥೆಯನ್ನು. ಪರಿಸರ ವ್ಯವಸ್ಥೆಯನ್ನು, ಜೀರ್ಣವ್ಯವಸ್ಥೆಯನ್ನು, ನರವ್ಯವಸ್ಥೆಯನ್ನು, ಮತ್ತು ಹೀಗೆ ಅನೇಕ ವ್ಯವಸ್ಥೆಗಳನ್ನು ಏರ್ಪಡಿಸಿದ್ದಾನೆ. ದಶಾಂಶವು ಯಾಜಕರು ಉಪಯೋಗಿಸುವ ವ್ಯವಸ್ಥೆಯಾಗಿದೆ. (ಅರಣ್ಯಕಾಂಡ 18:26) ಅದನ್ನು ಅವರ ಜೀವಮಾನಕ್ಕೂ ಮತ್ತು ಗುಡಾರದ ನಿರ್ವಹಣೆಗೂ ಉಪಯೋಗಿಸುತ್ತಿದ್ದರು. ಇದನ್ನು ಇಂದಿನ ಭಾಷೆಯಲ್ಲಿ ಹೇಳುವುದಾದರೆ ಸುವಾರ್ತೆಯನ್ನು ಸಾರುವುದಕ್ಕೆ ತಮ್ಮ ಜೀವನವನ್ನು ಮುಡುಪಾಗಿಟ್ಟಿರುವವರು ಎಂದು ಹೇಳಬಹುದು. ದಶಾಂಶವು ದೇವರ ಸುವಾರ್ತೆಯನ್ನು ಸಾರಲು ಸಹಾಯವಾಗುವ ಒಂದು ವ್ಯವಸ್ಥೆಯಾಗಿದೆ, ಮತ್ತು ಇಡೀ ರಕ್ಷಣೆಯ ಚರಿತ್ರೆಯಲ್ಲಿ ಅಂತಹ ಕೆಲಸಗಾರರನ್ನು ದಶಾಂಶದಿಂದ ಅವರಿಗೆ ಸಹಾಯ ಮಾಡುವುದು ಹಿಂದಿನಂದಲೂ ನಡೆದುಕೊಂಡು ಬಂದಿದೆ.

'ಅದೇ ರೀತಿಯಾಗಿ ಸುವಾರ್ತೆಯನ್ನು ಸಾರುವವರು ಸುವಾರ್ತೆಯಿಂದಲೇ ಜೀವನ ಮಾಡಬೇಕೆಂದು ನೇಮಿಸಿದನು? (1 ಕೊರಿಂಥ 9:14 ರಲ್ಲಿ ಪೌಲನು ಹೇಳುವಾಗ



ಅದರ ನೈತಿಕವಾದ ಭಾವವೇನು? 2 ಕೊರಿಂಥ 11:7–10 ರಲ್ಲಿ ಸುವಾರ್ತೆಯನ್ನು ಹೇಳುವವರಿಗೆ ಹೇಗೆ ಸಹಾಯ ಮಾಡಬೇಕು ಎಂದು ಹೇಳುತ್ತದೆ.

________________________________________

________________________________________

________________________________________

ಪೌಲನು ನಿಮ್ಮ ಸೇವೆ ಮಾಡುವದಕ್ಕೋಸ್ಕರ ನಾನು ಇತರ ಸಭೆಗಳಿಂದ ಸಂಬಳ ತೆಗೆದುಕೊಂಡು ಅವುಗಳನ್ನು ಸುಲುಕೊಂಡೆನು. (2 ಕೊರಿಂಥ 11:8) ರಲ್ಲಿ ಪೌಲನು ಹೇಳುವಾಗ ಅವನು ಬಡತನದಲ್ಲಿದ್ದ ಮಕೆದೋನ್ಯ ಸಭೆಯಿಂದ ಸಂಬಳ ಪಡೆದು ಶ್ರೀಮಂತವಾಗಿದ್ದ ಕೊರಿಂಥ ಸಭೆಯಲ್ಲಿ ಸೇವೆ ಮಾಡುತ್ತಿದ್ದನು. ಇದರಲ್ಲಿ ಆತನ ಉದ್ದೇಶವೇನೆಂದರೆ ಯಾರು ಸುವಾರ್ತೆಯನ್ನು ಸಾರುವರೋ ಅವರು ಸಂಬಳವನ್ನು ಪಡೆಯಲು ಅರ್ಹತೆಯನ್ನು ಹೊಂದುವರು.

ದಶಾಂಶವನ್ನು ಒಂದು ನಯಮಿತವಾದ ಉದ್ದೇಶಕ್ಕಾಗಿ ಉಪಯೋಗಿಸಬೇಕು ಮತ್ತು ಅದನ್ನು ಬೇರೆ ಕೆಲಸಗಳಿಗೆ ಉಪಯೋಗಿಸಬಾರದು. ದಶಾಂಶವನ್ನು ವಿಶೇಷವಾದ ಕಾರ್ಯಕ್ಕಾಗಿ ನಿಯಮಿಸಲಾಗಿದೆ. ಅದನ್ನು ಬಡವರ ಹಣವೆಂದು ಪರಿಗಣಿಸಬಾರದು. ಅದನ್ನು ಸುವಾರ್ತೆಯನ್ನು ಸಾರುವವರ ಜೀವನ ನಿರ್ವಹಣೆಗಾಗಿ ಮಾತ್ರ ಉಪಯೋಗಿಸಬೇಕು ಮತ್ತು ಬೇರೆ ಕಾರ್ಯಗಳಿಗೆ ಅದನ್ನು ಉಪಯೋಗಿಸಬಾರದು. **ಎಲೆನ್ ಜಿ ವೈಟ್, ಕೌನ್ಸಲ್ ಆನ್ ಸ್ಟೀವರ್ಡ್ ಶಿಪ್ ಪುಟ 103**.

ಯಾಜಕಕಾಂಡ 27:30 ನ್ನು ಓದಿರಿ ಇಲ್ಲಿ ಹೇಳಲಾಗಿರುವ ನಯಮವು ನಮಗೆ ಹೇಗೆ ಅನ್ವಯಿಸುತ್ತದೆ.

**ಪಾಠ 8 ದಶಾಂಶದ ಪರಿಣಾಮಗಳು ಫೆಬ್ರವರಿ 17–23**

**ಬುಧವಾರ ಫೆಬ್ರವರಿ 21**

## ಬಂಡಾರ

ದೇವರು ಗಾಳಿಗೆ ಒಂದು ಬಂಡಾರವನ್ನು ಇಟ್ಟಿದ್ದಾನೆ (ಯೆರೆಮಿಯ 10:13),

ನೀರು (ಕೀರ್ತನೆ 33:7), ಮತ್ತು ಹಿಮ ಹಾಗೂ ಆಲಿಕಲ್ಲು (ಯೋಬನು 38:22) ಇವುಗಳ ಮೇಲೆ ಆತನಿಗೆ ಸಂಪೂರ್ಣ ನಿಯಂತ್ರಣವಿದೆ. ಆದರೆ ದೇವರ ಪ್ರಶಸ್ತವಾದ ಬಂಡಾರ ಎಂದರೆ ಅದು ದಶಾಂಶವನ್ನು ಇಡುವ ಸ್ಥಳ. 'ಲೇವಿಯರು ದೇವದರ್ಶನದ ಗುಡಾರದ ಪರಿಚರ್ಯವನ್ನು ಮಾಡುವದಕ್ಕಾಗಿ ಇಸ್ರಾಯೇಲ್ಯರಿಂದ [ಸಕಲ ಪದಾರ್ಥಗಳ] ಹತ್ತನೆಯ ಪಾಲನ್ನು ಗೊತ್ತುಮಾಡಿ ಕೊಟ್ಟಿದ್ದೇನೆ. (ಅರಣ್ಯಕಾಂಡ 18:21) ಈ ವಚನವು ದಶಾಂಶವನ್ನು ಇರಿಸಲಾಗುವ ಬಂಡಾರದ ಕುರಿತಾಗಿ ಹೇಳಿರುವ ಮೊದಲ ವಚನವಾಗಿದೆ. ಮತ್ತು ಇದನ್ನು ಇಂದಿನ ದಿನಗಳಲ್ಲಿ 'ನಿಯಮದ ಬಂಡಾರ' ಎಂದು ಕರೆಯಬಹುದು. ಮುಂದೆ ದೇವರು ಇಸ್ರಾಯೇಲ್ಯರಿಗೆ ತಾನು ನಿಯಮಿಸಿದ ಒಂದು ನಿರ್ಧಿಷ್ಟ ಸ್ಥಳಕ್ಕೆ ದಶಾಂಶವನ್ನು ತೆಗೆದುಕೊಂಡು ಬರುವಂತೆ ತಿಳಿಸಿದನು. (ಧರ್ಮೋಪದೇಶಕಾಂಡ 12:5,6) ಸೋಲೋಮನನ ಸಮಯದಲ್ಲಿ ದಶಾಂಶವನ್ನು ಯೆರುಷಲೇಮಿನ ದೇವಾಲಯಕ್ಕೆ ನೀಡಲಾಗುತ್ತಿತ್ತು. ಪ್ರವಾದಿಯಾದ ಮಲಾಕಿಯು ಇಸ್ರಾಯೇಲ್ಯರಿಗೆ 'ನೀವು ದಶಾಮಾಂಶ ಯಾವತ್ತನ್ನೂ ಬಂಡಾರಕ್ಕೆ ತೆಗೆದುಕೊಂಡು ಬನ್ನಿರಿ' (ಮಲಾಕಿ 3:10) ರಲ್ಲಿ ಹೇಳುವಾಗ ಅವರಿಗೆ ಬಂಡಾರ ಎಂದರೆ ಏನು ಮತ್ತು ಅದು ಎಲ್ಲಿದೆ ಎಂದು ಚೆನ್ನಾಗಿ ತಿಳಿದಿತ್ತು. ಬಂಡಾರ ಎಂದರೆ ಎಲ್ಲಿ ಧಾರ್ಮಿಕ ಕಾರ್ಯಗಳು ನಡೆಯುತ್ತಿದ್ದವೋ ಮತ್ತು ಎಲ್ಲಿ ಯಾಜಕರು ತಮ್ಮ ಜೀವನಾಂಶವನ್ನು ಪಡೆಯುತ್ತಿದ್ದರೋ ಅದು ಬಂಡಾರವಾಗಿತ್ತು.

ಈ ಕೆಳಗಿನ ವಚನಗಳು ಬಂಡಾರವನ್ನು ಗುರುತಿಸಲು ನಮಗೆ ಹೇಗೆ ಸಹಾಯ ಮಾಡುತ್ತವೆ. 1 ಪೂರ್ವಕಾಲ ವೃತ್ತಾಂತ 26:20, 2 ಪೂರ್ವಕಾಲ ವೃತ್ತಾಂತ 31:11–13, ನೆಹೇಮಿಯ 10:38

ದಶಾಂಶವನ್ನು ಬಂಡಾರಕ್ಕೆ ತೆಗೆದುಕೊಂಡು ಬರುವದು ಸತ್ಯವೇದದಲ್ಲಿ ಇರುವ ಒಂದೇ ಒಂದು ವಿಧಾನವಾಗಿದೆ. ದಶಾಂಶವನ್ನು ಕೂಡಿಸಲು ದೇವರು ಒಂದು ಕೇಂದ್ರೀಯ ಬಂಡಾರವನ್ನು ನಿಯಮಿಸಿದ್ದನು. ಸವೆಂತ್ ಡೇ ಅಡ್ವೆಂಟಿಸ್ಟ್ ಸಭೆಯು



ಒಂದು ಜಾಗತಿಕ ಧರ್ಮ/ ಸಭೆಯಾಗಿದ್ದು ಬಂಡಾರದ ನಿಯಮವನ್ನು ಅಂಗಿಕರಿಸಿ ಅದನ್ನು ಕೈಕೊಂಡು ನಡೆಯುತ್ತದೆ. ಸಭಿಕರು ಸ್ಥಳೀಯ ಕಾನ್ಫರೆನ್ಸ್/ ಸೆಕ್ಷನ್ ಗೆ ಅಂದರೆ ಎಲ್ಲಿ ಅವರು ತಮ್ಮ ಸಭೆಯ ಸದಸ್ಯತ್ವವನ್ನು ಹೊಂದಿರುತ್ತಾರೋ ಅಂತಹ ಸ್ಥಳೀಯ ಸಭೆಯ ಮೂಲಕವಾಗಿ ತಮ್ಮ ದಶಾಂಶವನ್ನು ನೀಡುತ್ತಾರೆ. ಇಂತಹ ಸ್ಥಳೀಯ ಕಾನ್ಫರೆನ್ಸ್/ಸೆಕ್ಷನ್ ನಲ್ಲಿ ಬೋಧಕರು ತಮ್ಮ ಸಂಬಳವನ್ನು ಪಡೆಯುತ್ತಾರೆ.

'ದೇವರ ಕೆಲಸವೂ ವಿಸ್ತಾರವಾದಂತೆ, ಸಹಾಯಕ್ಕಾಗಿ ಕೂಗುವ ಧ್ವನಿ ಹೆಚ್ಚು ಹೆಚ್ಚು ಬಾರಿ ಬರುವುದಾಗಿದೆ. ಇಂತಹ ಕರೆಗಳನ್ನು ಉತ್ತರಿಸಬೇಕಾದರೆ ಕ್ರೈಸ್ತರು 'ನನ್ನ ಆಲಯವು ಆಹಾರಶೂನ್ಯವಾಗದಂತೆ, ನೀವು ದಶಾಮಾಂಶ ಯಾವತ್ತನ್ನೂ ಬಂಡಾರಕ್ಕೆ ತೆಗೆದುಕೊಂಡು ಬನ್ನಿರಿ, (ಮಲಾಕಿ 3:10) ಎಂಬ ಆಜ್ಞೆಯನ್ನು ಕೈಕೊಂಡು ನಡೆಯಬೇಕು. ನಂಬಿಕೆಯುಳ್ಳ ಕ್ರೈಸ್ತರು ತಮ್ಮ ದಶಾಂಶ ಮತ್ತು ಕಾಣಿಕೆಗಳನ್ನು ಸರಿಯಾಗಿ ದೇವರ ಆಲಯಕ್ಕೆ ತಂದರೆ ಬಂಡಾರವು ತುಂಬಿಹೋಗುತ್ತದೆ.ಸುವಾರ್ತೆಗಾಗಿ ಲಾಟರಿ, ಮೇಳ, ವಿನೋದ ಕೂಟಗಳನ್ನು ಆಯೋಜಿಸುವ ಅಗತ್ಯವಿರುವುದಿಲ್ಲ.?
**ಎಲೆನ್ ಜಿ ವೈಟ್, ಡಿ ಆಕ್ಟ್ಸ್ ಅಪೋಸ್ಟಲ್ಸ್ ಪುಟ 338.**

ಜನರು ತಮ್ಮ ದಶಾಂಶವನ್ನು ತಮ್ಮ ಇಷ್ಟ ಬಂದ ಕಡೆಗೆ ಕಳುಹಿಸಿದರೆ ಏನಾಗಬಹುದು ಎಂದು ಆಲೋಚಿಸಿರಿ. ಎಲ್ಲರೂ ಹೀಗೆ ಮಾಡಿದರೆ ದೇವರ ಕೆಲಸ ಏನಾಗುತ್ತದೆ?ಆದ್ದರಿಂದ ನಮ್ಮ ಸದಸ್ಯತ್ವ ಎಲ್ಲಿದೆಯೋ ಅಲ್ಲಿಗೆ ನಮ್ಮ ದಶಾಂಶವನ್ನು ಕೊಡುವುದು ಎಷ್ಟು ಪ್ರಮುಖ್ಯವಾಗಿದೆ.

**ಪಾಠ 8 ದಶಾಂಶದ ಪರಿಣಾಮಗಳು ಫೆಬ್ರವರಿ 17–23**

**ಗುರುವಾರ ಫೆಬ್ರವರಿ 22**

## ದಶಾಂಶ ಮತ್ತು ನಂಬಿಕೆಯಿಂದಲೆ ರಕ್ಷಣೆ

ರೋಮ 3:19–24ನ್ನು ಓದಿರಿ ಇಲ್ಲಿ ನಂಬಿಕೆಗೆ ಮುಖ್ಯವಾದ ಮತ್ತು ಪ್ರಮುಖವಾದ ಸತ್ಯವನ್ನು ತಿಳಿಸಲಾಗಿದೆ. ಈ ಬೋಧನೆಯನ್ನು ನಾವು ನಮ್ಮ ಸಿದ್ಧಾಂತಗಳ ಮೂಲವಾಗಿ ಇಟ್ಟುಕೊಳ್ಳಬೇಕು?

ಸತ್ಯವೇದದ ಮೂಲ ಬೋಧನೆಯೇಂದರೆ ನಾವೆಲ್ಲರೂ ಕೂಡ ವಿಮೋಚನೆಗೆ ಯೋಗ್ಯರಲ್ಲ. (ರೋಮ 3:23) ಒಂದು ವೇಳೆ ಅದಕ್ಕೆ ನಾವು ಯೋಗ್ಯರಾದರೆ ಅದು ನಮ್ಮ ಅರ್ಹತೆ ಮತ್ತು ಕ್ರಿಯೆಗಳಿಂದ ಮಾತ್ರ ಸಾಧ್ಯ ಇಂತಹ ಬೋಧನೆಯು ಸತ್ಯವೇದಕ್ಕೆ ವಿರುದ್ದವಾಗಿದೆ.

ರೋಮ 4:1–5 ನ್ನು ಓದಿರಿ ಕೃಪೆಯು ಅರ್ಹತೆಗೆ ಹೇಗೆ ವಿರುದ್ದವಾಗಿದೆ ಎಂಬುದಾಗಿ ಈ ವಚನಗಳು ಏನು ಹೇಳುತ್ತವೆ?

________________________________________

________________________________________

ಆದ್ದರಿಂದ ರಕ್ಷಣೆಯು ಅರ್ಹತೆಯಿಲ್ಲದವರಿಗೆ ನೀಡಲಾಗುವ ಒಂದು ಬಹುಮಾನವಾಗಿದೆ. (ಎಫೆಸ 2:8,9). ಕ್ರಿಸ್ತನ ಪರಿಪೂರ್ಣವಾದ ತ್ಯಾಗದ ಅರ್ಹತೆಯ ಮೂಲಕ ನಮ್ಮ ಖಾತೆಗೆ ಅದು ಜಮೆಯಾಗುತ್ತದೆ. ದಶಾಂಶ ವಿಚಾರವಾಗಿ ನೋಡುವುದಾದರೆ ದೇವರಿಗೆ ನೀಡುವುದರ ಮೂಲಕ ನಮಗೆ ಯಾವುದೇ ಲಾಭವು ಬರುವುದಿಲ್ಲ. ಯಾಕೆಂದರೆ ದಶಾಂಶವು ಮೊದಲನೇಯದಾಗಿ ದೇವರಿಗೆ ಸೇರಿದ್ದಾದರೆ, ಅದನ್ನು ಹಿಂತಿರುಗಿ ಕೊಡುವುದರಲ್ಲಿ ಯಾವ ಲಾಭವನ್ನು ಎದುರುನೋಡಬಹುದು?

ದಶಾಂಶವನ್ನು ಕೊಡುವುದು ನಮ್ಮನ್ನು ರಕ್ಷಿಸುವ ಕಾರ್ಯವಲ್ಲ. ನಾವು ಒಳ್ಳೆಯ ಕ್ರಿಯೆಗಳನ್ನು ಮಾಡಲು ದೇವರು ನಮ್ಮನ್ನು ಸೃಷ್ಟಿಸಿದ್ದಾನೆ. 'ನಾವು ಆತನ ನಿರ್ಮಾಣ; ಸತ್ಕಾರ್ಯಗಳನ್ನು ಮಾಡುವದಕ್ಕಾಗಿಯೇ ಕ್ರಿಸ್ತ ಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು. ನಾವು ಸತ್ಕಾರ್ಯಗಳನ್ನು ನಡಿಸುವವರಾಗಿ ಬದುಕಬೇಕೆಂದು ದೇವರು ನಮ್ಮನ್ನು ಮೊದಲೇ ನಿಯಮಿಸಿದನು.? (ಎಫೆಸ 2:10)

ಅದರೂ ಕೂಡ, ದಶಾಂಶವನ್ನು ಕೊಡುವುದು ವಿನಯದ ಅಥವಾ ತಗ್ಗಿಸಿಕೊಳ್ಳುವ ಸ್ವಭಾವವನ್ನು ತೋರಿಸುವುದಲ್ಲ ಅಥವಾ ದೇವರು ಹೇಳಿದ್ದನ್ನು ಮಾಡದೆ ಪ್ರತಿಭಟಿಸುವ ಮತ್ತು ಹಠವಾದಿಯ ಲಕ್ಷಣವಲ್ಲ. ನಾವು ದೇವರನ್ನು ಪ್ರೀತಿಸಿದರೆ, ಆತನಗೆ ವಿಧೆಯರಾಗಿರುತ್ತೇವೆ. ನಾವು ದೇವರ ಪಾರುಪತ್ಯಗಾರರಾಗಿದ್ದೇವೆ ಮತ್ತು ಆತನಗೆ ಎಲ್ಲವನ್ನೂ ಸಲ್ಲಿಸಬೇಕಾದ ಹಂಗಿನಲ್ಲಿದ್ದೇವೆ ಎಂಬ ನಂಬಿಕೆಯ ಹೊರಗಿನ



ಭಾವವ್ಯಕ್ತವಾಗಿದೆ. ದೇವರು ಸೃಷ್ಟಿ ಕರ್ತನು ಮತ್ತು ವಿಮೋಚಕನು ಎಂದು ಸಬ್ಬತ್ ನಮಗೆ ಪ್ರತಿವಾರದಲ್ಲೂ ಜ್ಞಾಪಕ ಪಡಿಸುತ್ತದೋ ಹಾಗೆಯೇ ದಶಾಂಶವನ್ನು ಕೊಡುವುದು ಕೂಡ ನಾವು ನಮ್ಮ ಸ್ವಂತವಲ್ಲ ಬದಲಿಗೆ ನಮ್ಮ ಜೀವನ ಮತ್ತು ರಕ್ಷಣೆ ದೇವರ ವರವಾಗಿದೆ ಎಂದು ಜ್ಞಾಪಕಪಡಿಸುತ್ತದೆ. ಇದರ ಪರಿಣಾಮವಾಗಿ, ನಾವು ನಂಬಿಕೆಯ ಜೀವನವನ್ನು ನಡೆಸುತ್ತಾ ನಮ್ಮ ನಂಬಿಕೆಯನ್ನು ಕಾಣುವ ರೀತಿಯಲ್ಲಿ ಲೋಕಕ್ಕೆ ತೋರಿಸಲು ದಶಾಂಶವು ನಮಗೆ ಸಹಾಯ ಮಾಡುತ್ತದೆ.

ಲೂಕ 21:1–4 ನ್ನು ಓದಿರಿ, ನಂಬಿಕೆಯಿಂದಲೇ ಜೀವಿಸುವುದರ ಕುರಿತು ಈ ವಚನಗಳು ಏನು ಹೇಳುತ್ತವೆ?

**ಪಾಠ 8 ದಶಾಂಶದ ಪರಿಣಾಮಗಳು ಫೆಬ್ರವರಿ 17–23**

**ಶುಕ್ರವಾರ ಫೆಬ್ರವರಿ 23**

ಹೆಚ್ಚಿನ ಚಿಂತನೆ : ನಮ್ಮ ಪ್ರತಿಯೊಂದುಶ್ವಾಸ, ಪ್ರತಿಯೊಂದು ಹೃದಯಬಡಿತ, ನಾವು ಬದುಕಿರುವ ಪ್ರತಿಯೊಂದು ಕ್ಷಣವು ಕೂಡ ದೇವರಿಂದ ಬಂದಿದೆ ಎಂದು ಮರೆಯುವುದು ಬಹಳ ಸುಲಭವಾಗಿದೆ. ಅ. ಪೋ ಕೃ 17 ರಲ್ಲಿ ಪೌಲನು ಅಥೆನ್ಸ್ ಪಟ್ಟಣದವರಿಗೆ ನಿಜವಾದ ದೇವರು ಅಂದರೆ ಒಬ್ಬನೇ ಸೃಷ್ಟಿಕರ್ತನ ಕುರಿತಾಗಿ ಹೇಳುತ್ತಾನೆ, 'ಜಗತ್ತನ್ನೂ ಅದರಲ್ಲಿರುವ ಎಲ್ಲಾ ವಸ್ತುಗಳನ್ನು ಉಂಟುಮಾಡಿದ ದೇವರು (ಅ ಪೋ ಕೃ 17:24) ಅದಲ್ಲದೆ ಆತನು ಅದನ್ನು ಕಾಪಾಡುವವನಗಿದ್ದಾನೆ (ಆತನಲ್ಲಿಯೇ ನಾವು ಜೀವಿಸುತ್ತೇವೆ ಚಲಿಸುತ್ತೇವೆ, ಇರುತ್ತೇವೆ. ಅ ಪೋ ಕೃ 17:28) ಅಥೆನ್ಸ್ ರವರಿಗೆ ನಿಜವಾದ ದೇವರ ಕುರಿತಾಗಿ ತಿಳಿದಿರಲಿಲ್ಲ. ಕ್ರೈಸ್ತರಾದ ನಮಗೆ ತಿಳಿದಿದೆ, ಈ ವಾಸ್ತವಿಕತೆಯು ನಮ್ಮ ಜೀವನಕ್ಕೆ ಮುಖ್ಯವಾದ ದಿಕ್ಸೂಚಿಯಾಗಬೇಕು, ಮತ್ತು ಇದರ ಪರಿಣಾಮವಾಗಿ ನಾವು ಹೇಳಿಕೊಳ್ಳುವ ಹಾಗೆ ಜೀವಿಸುವ ಹಂಗಿನಲ್ಲಿದ್ದೇವೆ.

ಆದ್ದರಿಂದ ದೇವರು ನಮ್ಮ ಮೇಲೆ ಹಕ್ಕು ಹೊಂದಿದ್ದಾನೆ, ಆತನು ತನ್ನ ಅಸ್ತಿಯನ್ನು ಮನುಷ್ಯರ ಕೈಗೆ ಒಪ್ಪಿಸಿದ್ದಾನೆ. ಆದರೆ ಆತನ ಕೆಲಸಕ್ಕಾಗಿ ನಿಷ್ಠೆಯಿಂದ ಹತ್ತನೆಯ ಒಂದು ಭಾಗವನ್ನು ಪ್ರತ್ಯೇಕ ಪಡಿಸಬೇಕು ಎಂದು ಬಯಸುತ್ತಾನೆ. ಈ ಹಣವನ್ನು ತನ್ನ ಖಜಾನೆಯಲ್ಲಿ ಇಡಬೇಕೆಂದು ಬಯಸುತ್ತಾನೆ. ಅದನ್ನು ಆತನ ಸ್ವಂತ ಆಸ್ತಿಯಾಗಿ

ತಿರುಗಿ ನೀಡಬೇಕೆಂದು ಆತನು ಬಯಸುತ್ತಾನೆ. ಇದರಿಂದ ಆತನ ಸುವಾರ್ತೆಯ ಕೆಲಸವನ್ನು ಇಡೀ ಲೋಕಕ್ಕೆ ತಿಳಿಸುವ ಸೇವೆಗಾಗಿ ಉಪಯೋಗವಾಗುವಂತೆ ಕೊಡಬೇಕಾಗಿದೆ. ಅದು ಆತನಗೆ ಮೀಸಲಾಗಿದೆ. ಇದರ ಮೂಲಕ ತನ್ನ ಬಂಡಾರದಲ್ಲಿ ಹಣವಿದ್ದು ಹತ್ತಿರದಲ್ಲಿರುವವರಿಗೆ ಮತ್ತು ದೂರದಲ್ಲಿರುವವರಿಗೆ ಸುವಾರ್ತೆಯನ್ನು ತಿಳಿಸಲು ಸಹಾಯಮಾಡುತ್ತದೆ. ಇದನ್ನು ವಿಧೇಯತೆಯಿಂದ ಕೈಕೊಂಡು ನಡೆಯುವುದರ ಮೂಲಕ ಸರ್ವವು ದೇವರಿಗೆ ಸೇರಿದೆ ಎಂದು ಗುರುತಿಸುತ್ತೇವೆ. **ಎಲೆನ್ ಜಿ ವೈಟ್ ಟೆಸ್ಟಿಮೊನಿಸ್ ಫಾರ್ ದಿ ಚರ್ಚ್ ಸಂಪುಟ 6, ಪುಟ 386**.

ಚರ್ಚಿಸಬೇಕಾದ ಪ್ರಶ್ನೆಗಳು

1. ಸಮಯವೂ ಬಹಳ ವೇಗವಾಗಿ ನಿತ್ಯತ್ವದ ಕಡೆಗೆ ಸಾಗುತ್ತಿದೆ. ದೇವರಿಗೆ ಸೇರಿದ್ದನ್ನು ನಾವು ಹಿಡಿದಿಟ್ಟುಕೊಳ್ಳಬಾರದು. ದೇವರು ನಮಗೆ ಅರ್ಹತೆಯ ಆಧಾರದ ಮೇಲೆ ನೀಡದೆ ಇದ್ದರೂ ಕೂಡ ಅದನ್ನು ನಾವು ವ್ಯರ್ಥವಾಗಿ ಉಪಯೋಗಿಸಬಾರದು. ಆತನು ಸಂಪೂರ್ಣ ಹೃದಯವನ್ನು ಬಯಸುತ್ತಾನೆ. ಆತನಿಗೆ ಅದನ್ನು ನೀಡಿರಿ, ಅದು ಸೃಷ್ಟಿಯ ಮತ್ತು ವಿಮೋಚನೆಯ ಮೂಲಕ ಆತನಗೆ ಸೇರಿದ್ದು. ಆತನು ನಿಮ್ಮ ಜ್ಞಾನವನ್ನು ಕೇಳಿದರೆ ಅದನ್ನು ಆತನಗೆ ನೀಡಿರಿ; ಅದು ಆತನಿಗೆ ಸೇರಿದೆ ಆತನು ನಿಮ್ಮ ಹಣ ಕೇಳಿದರೆ ಅದನ್ನು ಆತನಿಗೆ ನೀಡಿರಿ ಅದು ಆತನಿಗೆ ಸೇರಿದ್ದು. **ಎಲೆನ್ ಜಿ ವೈಟ್, ಡಿ ಆಕ್ಟ್ಸ್ ಅಪೋಸ್ಟಲ್ಸ್ ಪುಟ 566**. ಎಲೆನ್ ಜಿ ವೈಟ್ ರವರು 'ದೇವರಿಗೆ ಸೇರಿದ್ದನ್ನು ನಾವು ಹಿಡಿದಿಟ್ಟುಕೊಳ್ಳಬಾರದು. ದೇವರು ನಮಗೆ ಅರ್ಹತೆಯ ಮೇಲೆ ನೀಡದೆ ಇದ್ದರೂ ಕೂಡ ಅದನ್ನು ನಾವು ವ್ಯರ್ಥವಾಗಿ ಉಪಯೋಗಿಸಬಾರದು.' ಎಂದು ಹೇಳುವುದರ ಅರ್ಥವೇನು?

2. ಎಲ್ಲಾ ಸಭಿಕರೂ ಕೂಡ ದಶಾಂಶವನ್ನು ತಮ್ಮ ಇಷ್ಟ ಬಂದ ಹಾಗೆ ಉಪಯೋಗಿಸಿದರೆ ಏನಾಗಬಹುದು ಎಂದು ಆಲೋಚಿಸಿರಿ; ಅಂದರೆ ಅವರಿಗೆ ಸರಿಯೆನಿಸುವ ಕಾರ್ಯಕ್ಕೆ ಅದನ್ನು ಉಪಯೋಗಿಸುತ್ತಾ 'ಬಂಡಾರಕ್ಕೆ ತೆಗೆದುಕೊಂಡು ಬನ್ನಿರಿ' ಎಂಬ ಆಜ್ಞೆಗೆ ವಿರುದ್ದವಾಗಿ ನಡೆದುಕೊಂಡರೆ ಅದು ನಮ್ಮ ಸಭೆಗೆ ಹೇಗೆ ಮಾರಕವಾಗುತ್ತದೆ? ಆಗ ನಮ್ಮ ಸಭೆಯ ಪರಿಸ್ಥಿತಿ



ಏನಾಗುತ್ತದೆ? ಇಂತಹ ಕಾರ್ಯಗಳು ನಮ್ಮಲ್ಲಿ ಹೇಗೆ ಭೇಧಗಳನ್ನು ಹುಟ್ಟಿಸುತ್ತವೆ?

3. ಲೂಕ 21, ರಲ್ಲಿ, ದೇವಾಲಯದಲ್ಲಿ ನಡೆಯುತ್ತಿದ್ದ ಎಲ್ಲಾ ಭ್ರಷ್ಟಾಚಾರಗಳ ಕುರಿತು ಆತನಿಗೆ ಗೊತ್ತಿದ್ದರೂ ಕೂಡ ವಿಧವೆಯ ಕಾಣಿಕೆಯನ್ನು ಆತನು ಏಕೆ ಶ್ಲಾಘಿಸಿದನು? ದಶಾಂಶದ ಉಪಯೋಗದ ಕುರಿತಾಗಿ ಕೆಲವು ಪ್ರಶ್ನೆಗಳನ್ನು ಹೊಂದಿರುವ ಸಭಿಕರು ದಶಾಂಶವನ್ನು ತಮ್ಮ ಇಷ್ಟ ಬಂದ ಹಾಗೆ ಉಪಯೋಗಿಸುವುದರ ವಿಷಯವಾಗಿ ಈ ಸನ್ನಿವೇಶ ಏನು ಹೇಳುತ್ತದೆ?